**ಓ.ಎಸ್ ನಂ.93 /2023 ಡಿ.ಡಬ್ಲ್ಯೂ-1 (ಅಫ್ಸರ್)**

**ಸಾಕ್ಷಿಯನ್ನು ದಿನಾಂಕಃ 04.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎನ್ ಆರ್ ವಕೀಲರಿಂದಃ**

ನನಗೆ 1 ನೇ ಪ್ರತಿವಾದಿ ರವರು ಅವರ ಪರವಾಗಿ ವಿಶೇಷ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ನಾನು ಮತ್ತು 1 ನೇ ಪ್ರತಿವಾದಿರವರು ಒಂದೇ ಊರಿನವರು ಆಗಿದ್ದು ಬೇರೆ ಬೇರೆ ವಾಸವಿರುತ್ತೇವೆ. 1 ನೇ ಪ್ರತಿವಾದಿ ರವರ ಆರೋಗ್ಯ ಈಗಲೂ ಚೆನ್ನಾಗಿ ಇರುತ್ತದೆ ಎಂದರೆ ಸರಿ. ವಾದಿಗಳು ಪ್ರತಿವಾದಿಗಳ ವಿರುದ್ಧ ಯಾವ ಪರಿಹಾರ ಕೋರಿ ದಾವೆ ಮಾಡಿರುತ್ತಾರೆ ಎಂದು ನಾನು ತಿಳಿದಿರುತ್ತೇನೆ.

ದಾವಾಸ್ತಿ ಮೂಲತಃ ರೆಹಾಮಾನ್ ಸಾಬ್ ಲಾಲನ್ ಸಾಬ್ ರವರದ್ದಾಗಿರುತ್ತದೆ. ಸದರಿ ರವರು ಶಿವಮೊಗ್ಗ ಜಿಲ್ಲೆಯ ಸಕ್ಕರೆ ಬೈಲು ನವರಾಗಿರುತ್ತಾರೆ. ದಾವಾಸ್ತಿ ಅವರ ಮೂಲ ಆಸ್ತಿಯಾಗಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ 1 ದಾಖಲಾತಿಯು 1970 ನೇ ಇಸವಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ರೆಹಾಮಾನ್ ಸಾಬ್ ಮತ್ತು ಇಮಾಮ್ ಸಾಬ್ ರವರಿಗೆ ದಾವಾಸ್ತಿಯು ಹೇಗೆ ಬಂದಿರುತ್ತದೆ ಎಂದು ಅದರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಮೂಲತಃ ಅಂತರಸಂತೆಯ ನಿವಾಸಿಯಾಗಿರುತ್ತೇನೆ. ಸಾಬುಲಾಲ್ ಉ. ಸೈಯದ್ ಸಾಬು ಲಾಲ್ ರವರು ಮೂಲತಃ ಎಲ್ಲಿಯವರು ಎಂದು ನನಗೆ ತಿಳಿದಿರುವುದಿಲ್ಲ. ಸಾಬು ಲಾಲ್ ರವರ ತಂದೆಯ ಹೆಸರು ಮಹಮ್ಮದ್ ಸಾಬ್ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ತಿಳಿಸಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಾದ ಪತ್ರದಲ್ಲಿ ಸಾಬು ಲಾಲ್ ರವರ ತಂದೆಯ ಹೆಸರು ಮಹಮ್ಮದ್ ಸಾಬ್ ಇರುವ ಬಗ್ಗೆ

ತಿಳಿದಿರುತ್ತದೆ. ನಿಡಿ 1 ರಲ್ಲಿ ಸದರಿ ಸಾಬುಲಾಲ್ ರವರ ತಂದೆಯ ಹೆಸರು ಮಹಮ್ಮದ್ ಸಾಬ್ ರವರ ಬಗ್ಗೆ ವಿವರಣೆ ಇರುವುದಿಲ್ಲ ಎಂದರೆ ಸರಿ.

ಸಾಬು ಲಾಲ್ ರವರಾಗಲೀ ಮತ್ತು ಮಹಮ್ಮದ್ ಸಾಬ್ ರವರಾಗಲೀ ನಮ್ಮ ಕುಟುಂಬಕ್ಕೆ ಅಥವಾ 1 ನೇ ಪ್ರತಿವಾದಿಯವರ ಕುಟುಂಬಕ್ಕೆ ದಾವಾಸ್ತಿಗೆ ಸಂಬಂಧಿಸಿದಂತೆ ಯಾವುದೇ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ವಾದಿಗಳು ದಾವಾಸ್ತಿಯು ಮೂಲ ಮಹಮ್ಮದ್ ಸಾಬ್ ರವರದ್ದಾಗಿದ್ದು ನಂತರದಲ್ಲಿ ಸೈಯದ್ ಸಾಬು ಲಾಲ್ ಮತ್ತು ಅವರ ಕುಟುಂಬದವರು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ತಿಯನ್ನು ಸರ್ಕಾದವರು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆಯೇ (ಅನ್ಯಕ್ರಾಂತ) ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸರ್ಕಾರವು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನಂತರದಲ್ಲಿ ಗ್ರಾಮ ಠಾಣಾದವರಿಗೆ ನೀಡಲಾಗುತ್ತದೆ ಎಂದರೆ ಸರಿ.

ಸಾಬುಲಾಲ್ ರವರ ಕುಟುಂಬದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ವಾದಿಗಳು ಸದರಿ ಸಾಬುಲಾಲ್ ರವರ ಕುಟುಂಬದವರಾಗಿರುತ್ತಾರೆ ಎಂದರೆ ಸರಿ. ಮಹಮ್ಮದ್ ಖಾನ್ ಬಿನ್ ಲೇಟ್ ಬಾಷಾ ಸಾಬ್ ಎಂದರೆ ನನ್ನ ತಂದೆ. ನಮ್ಮ ತಂದೆಯವರಿಗೆ 3 ಆಸ್ತಿಗಳು ಇದ್ದವು. ನಮ್ಮ ತಂದೆಯವರಿಗೆ ನಾವು ಒಟ್ಟು 9 ಜನ ಮಕ್ಕಳು ಇರುತ್ತೇವೆ. ನಮ್ಮ ಒಳಗೆ ಕುಟುಂಬದಲ್ಲಿ ವಿಭಾಗ ವಾಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದಲ್ಲಿ ಆದ ವಿಭಾಗದಂತೆ ನನಗೆ ಅಂತರಸಂತೆ ಗ್ರಾಮದ ಸ. ನಂ. 10/1 ರಲ್ಲಿ 1 ಎಕರೆ, ಸ. ನಂ.105 ಕೆ ಆರ್ ಪುರದಲ್ಲಿ ಮುಳುಗಡೆ ಕಳೆದು 1 ಎಕರೆ 12 ಗುಂಟೆ ಮತ್ತು ಸ. ನಂ.8/1 ರಲ್ಲಿ 13. 1/2 ಗುಂಟೆಯಲ್ಲಿ 35*75 ಅಡಿಗಳ

ನಿವೇಶನ ನನ್ನ ಭಾಗಕ್ಕೆ ಬಂದಿರುತ್ತದೆ. ಸದರಿ 3 ಆಸ್ತಿಯು ವಿಭಾಗ ಪತ್ರದಂತೆ ನನಗೆ ಬಂದಿರುತ್ತದೆ ಎಂದರೆ ಸರಿ.

ದಾವಾಸ್ತಿಯ ಸ. ನಂ.8 ರಲ್ಲಿ ಖರಾಬು 12 ಗುಂಟೆ ಒಳಗೊಂಡಂತೆ ಒಟ್ಟು 2 ಎಕರೆ 36 ಗುಂಟೆ ಜಮೀನು ಇರುತ್ತದೆ. ದಾವಾಸ್ತಿಯು ಸ. ನಂ.8 ರಲ್ಲಿ ಖರಾಬು ಒಳಗೊಂಡತೆ ಒಟ್ಟು 2 ಎಕರೆ 38 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆ ಕೆರೆ ಮತ್ತು ಕಬಿನಿ ನೀರಿನ ತೊರೆ ಇರುತ್ತದೆ ಎಂದರೆ ಸಾಕ್ಷಿಯು ಕೆರೆ ಮತ್ತು ಓಣಿ ಇರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಗ್ರಾಮ ಠಾಣೆ, ಉತ್ತರಕ್ಕೆ ಗ್ರಾಮ ಠಾಣೆ ಹಾಗೂ ದಕ್ಷಿಣಕ್ಕೆ ಮಹಮ್ಮದಿಯವರ ಮಶಾನ ಇರುತ್ತದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಮಹದಮದಿಯರ ಮಶಾನ ಮತ್ತು ಮಾಲೇಗೌಡರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

ವಾದಿಗಳು ಯಾವುದೆಲ್ಲಾ ದಾಖಲಾತಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ನಾನು ದ್ವಿತೀಯ ಪಿಯುಸಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಿಪಿ 1 ರಂತೆ ದಾವಾಸ್ತಿಯು ಒಟ್ಟು ಖರಾಬು 12 ಗುಂಟೆ ಕಳೆದು 2 ಎಕರೆ 26 ಗುಂಟೆ ಎಂದು ಇರುತ್ತದೆ ಎಂದರೆ ಸರಿ. ಅದರಂತೆ ಸದರಿ ಜಮೀನು ಸಾಬುಲಾಲ್ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ 2 ರಲ್ಲಿ ದಾವಾಸ್ತಿಯು ಸಾಬುಲಾಲ್ ರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಪಿತ್ರಾರ್ಜಿತ ಎಂದು ತೋರಿಸಿರುವ ಬಗ್ಗೆ ನಾನು ಎಲ್ಲಿಯು ಪ್ರಶ್ನಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಸಾಬು ಲಾಲ್ ರವರೆ ಎಸಿ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿರುತ್ತಾರೆ ಮತ್ತು ಆ ದಾವೆಯು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಬು ಲಾಲ್ ರವರು ನಿಪಿ 2 ರಲ್ಲಿ ಅವರಿಗೆ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದ ತೋರಿಸಿರುವ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಆದರೂ ಸಹ ನಾನು ಅವರು ಎ ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಅಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯಲ್ಲಿ ಸಾಬುಲಾಲ್ ರವರ ಹೆಸರು ಇರುತ್ತದೆ. ಸಾಕ್ಷಿಯು ಮುಂದುವರಿದು ಎಲ್ಲಾ ಪ್ರತಿವಾದಿಗಳ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ರವರು ತಮ್ಮ ತಕರಾರಿನಲ್ಲಿ ಏನ ಹೇಳಿರುತ್ತಾರೆ

ಎಂದು ತಿಳಿದಿರುತ್ತೇನೆ. ಮತ್ತು ಅವರು ಯಾವುದೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂಬುದನ್ನು ತಿಳಿದಿರುತ್ತೇನೆ.

ಪ್ರತಿವಾದಿ 2 ರಿಂದ 7 ರವರಿಗೆ ದಾವಾಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರಿಗೆ ಕ್ರಯದ ಮೂಲಕ ಬಂದಿರುತ್ತದೆ. ನಂತರ ಅವರುಗಳು 1 ನೇ ಪ್ರತಿವಾದಿಗೆ ಕ್ರಯಕ್ಕೆ ನೀಡಿರುತ್ತಾರೆ. ಪ್ರತಿವಾದಿ 2 ರಿಂದ 4 ರವರಿಗೆ ದಾವಾಸ್ತಿ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಲಾಲನ್ ಸಾಬ್ ಮತ್ತು ರೆಹಾಮಾನ್ ಸಾಬ್ ರವರು ಅಕ್ಬರ್ ಸಾಬ್ ರವರಿಗೆ ಕ್ರಯಕ್ಕೆ ನೀಡಿರುತ್ತಾರೆ ನಂತರ ಅಕ್ಬರ್ ಸಾಬ್ ರವ ರಿಂದ ಅವರ ಮಗ ಅಬ್ದುಲ್ ಸತ್ತರ್ ಸಾಬ್ ರವರಿಗೆ ಬಂದಿರುತ್ತದೆ. ಸದರಿ ಅಬ್ದಲ್ ಸತ್ತರ್ ಸಾಬ್ ರವರಿಂದ ಅವರ ಹಿರಿಯ ಮಗ ಪ್ರತಿವಾದಿ 2 ಎ ಎಸ್ ಸರ್ದಾರ್ ಖಾನ್, ಪೈರೋಜ್ ಖಾನ್ ಮತ್ತು ಜಾಹೇದ ರವರಿಗೆ ಬಂದಿರುತ್ತದೆ. ಸಾಕ್ಷಿಗೆ ಲಾಲನ್ ಸಾಬ್ ಮತ್ತು ರೆಹಮಾನ್ ಸಾಬ್ ರವರಿಗೆ ದಾವಾಸ್ತಿಯು ಬಂದಿರುವ ಬಗ್ಗೆ ನೀವೇನಾದರು ದಾಖಲಾತಿಯನ್ನು ಹಾಜರುಪಡಿಸಿರುದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ಅವರೇ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಆ ದಾಖಲಾತಿಯು ಇದರಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಲಾಲನ್ ಸಾಬ್ ಮತ್ತು ರಹಮಾನ್ ಸಾಬ್ ರವರಿಗೆ ದಾವಾಸ್ತಿಯು ಸಂಬಂದಿಸಿರುವುದಿಲ್ಲ ಆದರೂ ಸಹ ದಾವಾಸ್ತಿಯು ಮೂಲ ಅವರಿಗೆ ಸೇರಿತ್ತುಎಂದುಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯು ಮೂಲತಃ ರಹಮಾನ್ ಸಾಬ್ ರವರಿಗೆ ಸೇರಿತ್ತು ಎಂಬುದನ್ನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಅದನ್ನು ಯಾವಾಗ ಹಾಜರುಪಡಿಸುತ್ತೀರಾ ಎಂದರೆ ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಗೂ ನನಗೂ ಯಾವುದೇ ಸಂಬಂದ ಇರುವುದಿಲ್ಲ ಅದೇ ರೀತಿ ಪ್ರತಿವಾದಿಗಳಿಗೂ ಸಹ ಯಾವುದೇ ಸಂಬಂದ ಇಲ್ಲದೆ ಇದ್ದರು ವಾದಿಗಳಿಗೆ ತೊಂದರೆಯನ್ನು ನೀಡುತ್ತಿರುತ್ತೇವೆ ಎಂದರೆ ಸರಿಯಲ್ಲ.

ದಾವಾಸ್ತಿಯು ಮೂಲತಃ ಸಾಬುಲಾಲ್ ರವರಿಗೆ ಸೇರಿದ ಆಸ್ತಿಯಾಗಿದ್ದು ಈಗ ಅದನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳೆಲ್ಲಾ ಸೇರಿಕೊಂಡು ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ತಮ್ಮದೆ ಸ್ವತ್ತಾದ ದಾವಾಸ್ತಿಯ ಹತ್ತಿರ ದಿಃ 25.05.2023 ರಂದು ಬಂದಾಗ ನಾವೆಲ್ಲಾರು ಸೇರಿ ಅಡ್ಡಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗೂ ಮತ್ತು ಆಸ್ತಿಗೂ ಯಾವುದೇ ಸಂಬಂದ ಇಲ್ಲದೆ ಇದ್ದರೂ ಸಹ ವಾದಿಗಳ ಸ್ವಾಧೀನಕ್ಕೆ ತೊಂದರೆಯನ್ನು ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ